# ಪಸೆಯಾಡುತಿದೆ ಮಳಲ ಕಣ ಕಣ



ಕಲೆ: ವಾಗೀಶ ಹೆಗಡೆ

ನಾ ಬಯಸುವುದು
ನಿನ್ನ ಕೈಗಳನ್ನಲ್ಲ
ಸ್ಪರ್ಶವನ್ನು
ತಲೆ ಸವರಿ ಕೂದಲೆಳೆ ಎಳೆಗೆ
ಜೀವದುಂಬುವ
ನಿನ್ನ ನಿರಾಳವನ್ನು

ಸುಟ್ಟು ಹೋಗಬಹುದು
ಕಣ್ಣುಗಳು
ಬಿರು ಬೆಂಕಿಯಲಿ
ನೋಟವೊಂದು ಸಾಕು
ಸಂತೈಸಲು
ಜೀವಮಾನವಿಡೀ ತಂಪಾಗಿ

ಸೊಗಸು ಸ್ವರ್ಗವ
ತೋರಿದ ಮೈ
ಹಾದಿಯಲಿ ಬಳಲಿ ಬೆಂಡಾಗಿ
ಕೊಳೆಯಬಹುದು
ಕೊನೆಗುಳಿದದ್ದು
ಆ ಎದೆ ಮಿದುವು

ಒಮ್ಮೆ ಕಂಡ
ನಿನ್ನ ಮೀನಖಂಡದ ಮಿಂಚಲಿ
ಕಾಣುವ ಕನಸು
ಕತ್ತಲೇ ಚಲಿಸಿ ಬೆಳಕಾದಂತೆ
ಉಳಿದದ್ದು
ನಕ್ಷತ್ರದ ಮಿನುಗು!

ಎಂಜಲೊಸರುವ ನಾಲಗೆ
ಗಾಳಿಯಲಿ ಹೊರಳಿ ಹೊರಳಿ
ನಾ ಬಯಸಿದ್ದು ಬರೀ ಮಾತೇ?
ಬಯಲ ಬೆಳಗುವ ಉಸಿರು

ಬತ್ತಿದಂತಿದೆ ನದಿ
ಬತ್ತಿರಬಹುದು
ಪಸೆಯಾಡುತಿದೆ ಮಳಲ ಕಣ ಕಣ
ಕೊರೆದು ತೋರಿದಂತಿವೆ ದಡ
ಸುತ್ತಲ ಸಮೃದ್ಧ ಹಸಿರು
ಬತ್ತದು ನನ್ನೆದೆಯಿಂದ ನಿನ್ನೆದೆಗೆ
ಹರಿವ ನೀರು

● ರವಿ ಬೆಸಗರಹಳ್ಳಿ